(ರೂ. ಲಕ್ಷಗಳಲ್ಲಿ)

ಸ್ಥಳ	ಮೃತಪಟ್ಟವರ ಕುಟುಂಬಗಳಿಗೆ ನೀಡಿದ ಅನುಕಂಪ ಭತ್ಯೆ	ಪರಿಹಾರ ಕೇಂದ್ರಗಳನ್ನು ನಡೆಸಲು ತಗುಲಿದ ವೆಚ್ಚ	ಗುಡಿಸಲು ನಾಶಕ್ಕೆ ನೀಡಿದ ಪರಿಹಾರ			ಒಟ್ಟು ಪರಿಹಾರ
			ನಗದು ರೂಪ	ಕಟ್ಟಡ ಸಾಮಗ್ರಿಗಳ ರೂಪದಲ್ಲಿ	ಒಟ್ಟು	
ಬೆಂಗಳೂರು ನಗರ	4.00	0.44	10.15	-	10.15	14.59
ಸಿಂಧನೂರು	-	*	2.59	11.60	14.19	14.19

* ಸ್ಥಳೀಯ ಸರ್ಕಾರೇತರ ಸಂಸ್ಥೆಗಳ ನೆರವಿನಿಂದ ಪರಿಹಾರ ಕೇಂದ್ರಗಳನ್ನು ನಿರ್ವಹಿಸಲಾಗಿದೆ.

ಆ) ಪ್ರಧಾನ ಮಂತ್ರಿಗಳ ಪರಿಹಾರ ನಿಧಿಯಿಂದ ಯಾವುದೇ ಪರಿಹಾರ ಬಂದಿರುವುದಿಲ್ಲ.

ಇ) ಕೇಂದ್ರದ ಒಂಭತ್ತನೇ ಹಣಕಾಸು ಆಯೋಗದ ಶಿಫಾರಸಿನನ್ವಯ ಸ್ಥಾಪಿಸಲ್ಪಟ್ಟಿರುವ ರಾಜ್ಯ ಪ್ರಕೃತಿ ವಿಕೋಪ ಪರಿಹಾರ ನಿಧಿಯಲ್ಲಿ, ಆಕಸ್ಮಿಕ ಬೆಂಕಿ, ನೆರೆಹಾವಳಿ, ಬರ ಇತ್ಯಾದಿ ನೈಸರ್ಗಿಕ ವಿಕೋಪಗಳು ಸಂಭವಿಸಿದಾಗ ಪರಿಹಾರ ಮತ್ತು ಪುನರ್ವಸತಿ, ಕಾರ್ಯಗಳನ್ನು ಕೈಗೊಳ್ಳಬಹುದಾಗಿದೆ. ಆದ್ದರಿಂದ, ಇನ್ನಾವುದೇ ಶಾಶ್ವತ ನಿಧಿಯ ವ್ಯವಸ್ಥೆ ಮಾಡುವ ಅಗತ್ಯವಿಲ್ಲ.

ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ : 24 ಲಿಖಿತ ಮೂಲಕ ಉತ್ತರಿಸುವ 13ನೇ ಪಟ್ಟಿಯಲ್ಲಿರುವ 40 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 621, 622, 596, 571, 423, 425, 427, 564, 440 ಮತ್ತು 441 ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿದ 30 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಉತ್ತರಗಳನ್ನು ಸಭೆಯ ಮುಂದೆ ಮಂಡಿಸುತ್ತೇನೆ.

ರಾಜ್ಯದಲ್ಲಿ ಕೆಲಸ ಕಳೆದಕೊಂಡಿರುವ ಪಟೇಲರುಗಳಿಗೆ ಅಡ್ವಾಕ್ ವಿಶ್ರಾಂತಿ ವೇತನ

642 - ಶ್ರೀ ಎ.ವಿ. ಉಮಾಪತಿ (ಹೊಳಲ್ಕೆರೆ) : ಮಾನ್ಯ ಕಂದಾಯ ಮತ್ತು ಸಮಾಜ ಕಲ್ಯಾಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) *ಆನುವಂಶೀಕ ಹಕ್ಕು ರದ್ದಿಯಾತಿ ಕಾಯ್ದೆ ಮೇರೆಗೆ ಹಕ್ಕು ಕಳೆದುಕೊಂಡ ಗ್ರಾಮಾಧಿಕಾರಿಗಳ ಪೈಕಿ ಶ್ಯಾನುಭೋಗರುಗಳಿಗೆ ಸರ್ಕಾರ ಕೋರ್ಟು ಆದೇಶದಂತೆ 500.00 ರೂ. ಅಡ್ವಾಕ್ ವಿಶ್ರಾಂತಿ ವೇತನ ಪಾವತಿ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?*

ಆ) *ಆ ರೀತಿ ರಾಜ್ಯದಾದ್ಯಂತ ಪಟೇಲರುಗಳಿಗೆ ತಿಂಗಳಿಗೆ ಕೇವಲ 100.00 ರೂ. ಮಾಸಿಕ ವಿಶ್ರಾಂತಿ ವೇತನ ಪಾವತಿ ಮಾಡುತ್ತಿರುವ ತಾರತಮ್ಯ ಕುರಿತು ಸದನದಲ್ಲಿ ಕಂದಾಯ ಮಂತ್ರಿಗಳು ತಾರತಮ್ಯ ನಿವಾರಣೆಗೆ ಸರ್ಕಾರದ ಕ್ರಮಗಳೇನು?*

ಇ) *ಪಟೇಲರಿಗೂ 500.00 ಮಾಸಿಕ ಅಡ್ವಾಕ್ ವಿಶ್ರಾಂತಿ ವೇತನ ನೀಡುವ ಭರವಸೆ ನೀಡಿದ್ದು ಈವರೆವಿಗೂ ಆ ಬಗ್ಗೆ ಸರ್ಕಾರ ವಿಳಂಬ ನೀತಿ ಅನುಸರಿಸುತ್ತಿರಲು ಕಾರಣವೇನು?*

ಈ) *ಈಗಲಾದರೂ ಸರ್ಕಾರ ಆ ಬಗ್ಗೆ ತೀವ್ರ ಕ್ರಮ ತೆಗೆದುಕೊಳ್ಳುವುದೇ?*